ಇ)	ನಿರ್ಮಾಣ ಹಂತದಲ್ಲಿ ಬಡ್ಡಿ ಸಹಾಯಧನ (ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸಮಾನವಾಗಿ) (Interest Subsidy during construction)	492
ಈ)	ಹಣಕಾಸು ಸಂಸ್ಥೆಗಳಿಂದ ಸಾಲಗಳು (Senior term debt) (by financial instituions)	2953
	ಒಟ್ಟು	**5605**

4299 (5084) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಗೆ ಬರುವ ಅಗಲಕೋಟೆ ಹ್ಯಾಂಡ್ ಪೋಸ್ಟ್, ತಿಪ್ಪಸಂದ್ರ ಹ್ಯಾಂಡ್ ಪೋಸ್ಟ್ ಇವೆರಡು ಸ್ಥಳಗಳಿಗೆ ಪೊಲೀಸ್ ಚೌಕಿಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಳ್ಳಲಿರುವ ಮುಂದಿನ ಕ್ರಮವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಹ್ಯಾಂಡ್ ಪೋಸ್ಟ್‌ನಲ್ಲಿ ಹೊರಠಾಣೆ ತೆರೆಯುವ ಅವಶ್ಯಕತೆ ಇರುತ್ತದೆ ಎಂದು ಮತ್ತು ಅಗಲಕೋಟೆ ಹ್ಯಾಂಡ್ ಪೋಸ್ಟ್‌ನಲ್ಲಿ ಅಂತಹ ಅವಶ್ಯಕತೆ ಇಲ್ಲವೆಂದು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಆ) ತಿಪ್ಪಸಂದ್ರದಲ್ಲಿ ಹೊರಠಾಣೆ ತೆರೆಯುವ ಪ್ರಸ್ತಾವನೆಯು ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

4300 (5358) ಶ್ರೀ ಬಂಡೆಪ್ಪ ಕಾಶೆಂಪುರ್ (ಬೀದರ್) :– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವತಿಯಿಂದ 2004 ಜನವರಿಯಿಂದ ವಿವಿಧ ಯೋಜನೆಗಳಿಗಾಗಿ ವೆಚ್ಚ ಮಾಡಿದ ಹಣವೆಷ್ಟು; (ಯೋಜನಾವಾರು ವಿವರ ನೀಡುವುದು);

ಆ) ಬೀದರ್ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಯಾವುದಾದರೂ ಹೊಸ ಯೋಜನೆಯನ್ನು ಇಲಾಖೆಯ ವತಿಯಿಂದ

ಕೈಗೆತ್ತಿಕೊಳ್ಳುವ ಯೋಜನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿರುವ ಮೂರು ಯೋಜನೆಗಳಿಗಾಗಿ 2004 ಜನವರಿಯಿಂದ ಮೇ–2005ರವರೆಗೆ ವೆಚ್ಚ ಮಾಡಿದ ವಿವರ ಈ ಕೆಳಗಿನಂತಿದೆ.

ಕ್ರ.ಸಂ	ಯೋಜನೆ ಹೆಸರು	2004 ಜನವರಿಯಿಂದ ಮೇ–05 ವರೆಗೆ ಮಾಡಿದ ವೆಚ್ಚ (ರೂ.ಲಕ್ಷಗಳಲ್ಲಿ)
1	ಕಾರಂಜಾ	5690.97
2	ಚುಳಕಿನಾಲಾ	395.43
3	ಮೇಲ್ದಂಡೆ ಮುಲ್ಲಾಮಾರಿ	ಇರುವುದಿಲ್ಲ
	ಸಣ್ಣ ನೀರಾವರಿ ಅಡಿಯಲ್ಲಿ	
4	ನಬಾರ್ಡ್ ಯೋಜನೆ	78.72
5	ನಬಾರ್ಡ್ ಇತರ (ರಾಜ್ಯ ವಲಯ ಯೋಜನೆ)	5.70
6	ರೈತ ಕಾಯಕ ಕೆರೆ ಯೋಜನೆ	8.97
7	11ನೇ ಹಣಕಾಸು ಆಯೋಗದಡಿ ಏತ ನೀರಾವರಿ ಯೋಜನೆಗಳ ಪುನರುಜ್ಜೀವನಕ್ಕಾಗಿ	37.62

ಆ) ಭಾರಿ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿ ಬೀದರ್ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಯಾವುದೇ ಹೊಸ ಯೋಜನೆಯನ್ನು ಇಲಾಖೆಯ ವತಿಯಿಂದ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಇರುವುದಿಲ್ಲ.

ಬೀದರ್ ಮತ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಅಡಿಯಲ್ಲಿ ಪ್ರಾರಂಭಿಸಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಅನುಬಂಧ – 1

ಬೀದರ್ ಮತಕ್ಷೇತ್ರದಲ್ಲಿ ಈಗಾಗಲೇ ಈ ಕೆಳಗಿನ ಕಾಮಗಾರಿಗಳು ಪ್ರಾರಂಭಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಷರಾ
1	ಮನ್ನಳ್ಳಿ ಇಂಗು ಕೆರೆ	30.00 ಲಕ್ಷ	0	ವರ್ಷ 2003–04 ರಲ್ಲಿ ಪ್ರಾರಂಭಿಸಲಾಗಿದೆ.
2	ಅಯಾಸಪೂರ ಇಂಗು ಕೆರೆ	30.00 ಲಕ್ಷ	0	–ಸದರ–
3	ಯಾಕತಪೂರ ಇಂಗುಕೆರೆ	26.00 ಲಕ್ಷ	0	ಪ್ರಾರಂಭಿಸಬೇಕಾಗಿದೆ.

ಈ ಕೆಳಗಿನ ಕಾಮಗಾರಿಗಳು ರಾಜ್ಯ ಆಯವ್ಯಯದಲ್ಲಿ ಅಥವಾ ನಬಾರ್ಡ್ ಯೋಜನೆಯಡಿಯಲ್ಲಿ ಅನುಮೋದನೆ ಪಡೆಯಲು ಪ್ರಸ್ತಾಪಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	ಸಿಂಧೋಲ ಬಂದಾರ	70.00	ಪೂರ್ವಭಾವಿ ತನಿಖಾ ವರದಿ ಸಲ್ಲಿಸಲಾಗಿದೆ.
2	ಕಂಗಟಿ ಕೆರೆ	90.00	ಸರ್ವೇಕ್ಷಣೆ ಮಾಡಬೇಕಾಗಿದೆ.
3	ಚಿಂತಲಗೇರಾ ಕೆರೆ	120.00	–ಸದರ–
4	ಗಾದಗಿ ಇಂಗು ಕೆರೆ	30.00	–ಸದರ–

5	ಅಯಾಸಪೂರ ಗ್ರಾಮದ ಕೆರೆ ಹಳೆಯ ಕೆರೆ ಜೀರ್ಣೋದ್ಧಾರ	120.00	ಸರ್ವೇಕ್ಷಣೆ ಮಾಡಲಾಗಿದೆ.
6	ಒಡೆದು ಹೋದ ಚಿಮಕೊಡ ಕೆರೆ ಜೀರ್ಣೋದ್ಧಾರ	90.00	ಅಂದಾಜು ಪಟ್ಟಿ ಸಿದ್ಧಪಡಿಸಿದೆ.
7	ಚಿಟ್ಟಾ ಕೆರೆ	60.00	ಸರ್ವೇಕ್ಷಣೆ ಮಾಡಬೇಕಾಗಿದೆ.
8	ತಡಪಳ್ಳಿ ಕೆರೆ	100.00	–ಸದರ–
9	ಮರಕುಂದಾ ಕೆರೆ	100.00	–ಸದರ–
	ಒಟ್ಟು	**780.00**	

4301 (5359) ಶ್ರೀ ಬಂಡೆಪ್ಪ ಕಾಶೆಂಪುರ್ (ಬೀದರ್) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ವಿವಿಧ ಕಾರ್ಯಕ್ರಮ ಗಳಿಗಾಗಿ ವಿವಿಧ ಸಂಘ–ಸಂಸ್ಥೆಗಳಿಗೆ ಅನುದಾನದ ಮೂಲಕ ಬೀದರ್ ಜಿಲ್ಲೆಯಲ್ಲಿ 2003ರಿಂದ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; (ಸಂಘ ಸಂಸ್ಥೆಗಳವಾರು, ತಾಲ್ಲೂಕುಗಳವಾರು, ಅನುದಾನಗಳವಾರು ವಿವರ ನೀಡುವುದು);

ಆ) ಬೀದರ್ ವಿಧಾನ ಸಭಾ ಕ್ಷೇತ್ರದಲ್ಲಿ ಇಲಾಖೆಗೆ ಅನುದಾನ ಕೋರಿ ಬಂದಿರುವ ಅರ್ಜಿದಾರರ ಸಂಖ್ಯೆ ಎಷ್ಟು; ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) :

ಅ) 1) 2003 ರಿಂದ ಈವರೆವಿಗೆ ವಿವಿಧ ಕಾರ್ಯಕ್ರಮಗಳಿಗಾಗಿ ವಿವಿಧ ಸಂಘ ಸಂಸ್ಥೆಗಳಿಗೆ ಅನುದಾನದ ಮೂಲಕ ಬೀದರ್ ಜಿಲ್ಲೆಗೆ ರೂ.5,00,000/– ಗಳನ್ನು ಬಿಡುಗಡೆ ಮಾಡಲಾಗಿದೆ.